**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ.**

**ಸ್ಪೆಷಲ್ ಕೇಸ್ ನಂ. 54/2019**

**ಪ್ರಾಸಾ : 6**

**ಚಾಸಾ : 10**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ರವೀಂದ್ರ ಬಿ.ಕೆ.** |
| **ತಂದೆಯ ಹೆಸರು** | : | **ಕುಮಾರಪ್ಪ ಬಿ.ಎ.** |
| **ವಯಸ್ಸು** | : | **56 ವರ್ಷ** |
| **ವೃತ್ತಿ** | : | **ಪ್ರಥಮ ದರ್ಜೆ ಸಹಾಯಕರು,<br>ಸೋಮವಾರಪೇಟೆ ತಾಲ್ಲೂಕು ಪಂಚಾಯತ್** |
| **ವಾಸ** | : | **ಸೋಮವಾರಪೇಟೆ.** |

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 25.09.2023**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಕಳೆದ 10 ವರ್ಷಗಳಿಂದ ಸೋಮವಾರಪೇಟೆ ತಾಲ್ಲೂಕು ಪಂಚಾಯತಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಚಾಸಾ-11 ಹಾಗೂ ಪ್ರಾಸಾ-2 ರವರ ಪರಿಚಯ ಇದೆ.

ದಿನಾಂಕಃ21.10.2019 ರಂದು ನಾನು ಕಛೇರಿಯಲ್ಲಿ ಇದ್ದಾಗ ನನ್ನ ಮೇಲಾಧಿಕಾರಿಯವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಹಜರ್ ಗೆ ಪಂಚರಾಗಿ ಸಹಕರಿಸಲು ಪೊಲೀಸರು ತಿಳಿಸಿದ ಮೇರೆಗೆ, ಆ ಪ್ರಕಾರ ನನ್ನನ್ನು ನನ್ನ ಮೇಲಾಧಿಕಾರಿಗಳು ಕಳುಹಿಸಿದ ಮೇರೆಗೆ, ಮಧ್ಯಾಹ್ನ 1.10 ಕ್ಕೆ ಸೋಮವಾರಪೇಟೆಯ ಕಕ್ಕೆ ಹೊಳೆ ಬಳಿ ಕರೆದುಕೊಂಡು ಹೋಗಿ ಅಲ್ಲಿ ಸೋಮವಾರಪೇಟೆ ಮಡಿಕೇರಿಗೆ

ಹೋಗುವ ರಾಜ್ಯ ಹೆದ್ದಾರಿ ರಸ್ತೆಯ ಬಳಿ ಅಭಿಮನ್ಯ ಕುಮಾರ್ ವಕೀಲರ ಮನೆಯ ಮುಂದೆ ಇರುವ ರಸ್ತೆಯ ಪಕ್ಕದಲ್ಲಿ ಪ್ರಾಸಾ-2 ರವರು ಸ್ಥಳವನ್ನು ತೋರಿಸಿದ ಮೇರೆಗೆ, ಆರೋಪಿ ಹಾಗೂ ಪ್ರಾಸಾ-1, 2 ರವರ ಮಧ್ಯೆ ಜಗಳ ಆಗಿದೆ ಎಂದು ಹೇಳಿ ಸದರಿ ಸ್ಥಳವನ್ನು ಪರಿಶೀಲಿಸಿ ನನ್ನ ಸಮಕ್ಷಮದಲ್ಲಿ ಮಹಜರ್ ತಯಾರಿಸಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ಆ ಸಂದರ್ಭದಲ್ಲಿ ತಯಾರಿಸಿದ ಮಹಜರ್ ಇದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಮುಂದುವರೆದು ನಮ್ಮನ್ನು ಪ್ರಾಸಾ-2 ಹಾಗೂ ಪೊಲೀಸರು ತಮ್ಮಣ್ಣ ಎಂಬುವವರ ಮನೆಗೆ ಹೋಗುವ ರಸ್ತೆಯ ಬಳಿ ಕರೆದುಕೊಂಡು ಹೋಗಿ, ಅಲ್ಲಿ ಪ್ರಾಸಾ-2 ರವರನ್ನು ತೋರಿಸಿ, ಸದರಿ ಸ್ಥಳದಲ್ಲಿ ಆರೋಪಿ ಪ್ರಾಸಾ-1 ರವರಿಗೆ ಗುಂಡು ಹೊಡೆದಿದ್ದಾರೆ ಎಂದು ಸ್ಥಳವನ್ನು ತೋರಿಸಿದ ಮೇರೆಗೆ, ಪೊಲೀಸರು ಸ್ಥಳವನ್ನು ಪರಿಶೀಲಿಸಿ, ಸ್ಥಳದಲ್ಲಿ ಇದ್ದ ಬುಲೆಟ್ ಬೈಕನ್ನು ಅಮಾನತ್ತುಪಡಿಸಿಕೊಂಡಿದ್ದಾರೆ. ಸದರಿ ಸ್ಥಳದಲ್ಲಿ ಯಾವುದೇ ರಕ್ತದ ಕುರುಹುಗಳು ಇದ್ದಿರಲಿಲ್ಲ. ಆ ಸಂದರ್ಭದಲ್ಲಿ ಮಳೆ ಇದ್ದುದ್ದರಿಂದ ರಕ್ತದ ಕಲೆಗಳು ಕಂಡುಬಂದಿರುವುದಿಲ್ಲ. ಈಗ ನಾನು ನೋಡುತ್ತಿರುವ ಮಹಜರ್ ಆ ಸಂದರ್ಭದಲ್ಲಿ ತಯಾರಿಸಿದ ಮಹಜರ್ ಇದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲು ಆರೋಪಿ ಪರ ಎ.ಜಿ.ಜಿ., ವಕೀಲರಿಂದಃ**

ನಾನು ಸೋಮವಾರಪೇಟೆ ತಾಲ್ಲೂಕು ಪಂಚಾಯತಿಯಲ್ಲಿ ಕೆಲಸ ಮಾಡುತ್ತೇನೆ. ನನ್ನ ಕೆಲಸದ ವೇಳೆ ಬೆಳಗ್ಗೆ 10.00 ರಿಂದ ಸಂಜೆ 5.00 ಗಂಟೆವರೆಗೆ. ನಾನು ಆ ದಿನ ಬೆಳಗ್ಗೆ 10.00 ಗಂಟೆಗೆ ಕೆಲಸಕ್ಕೆ ಹೋಗಿದ್ದೆ. ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ನನ್ನ ಇಲಾಖೆಯ ಮೇಲಾಧಿಕಾರಿಗಳು ಮಹಜರ್ ಗೆ

ಹೋಗಲು ತಿಳಿಸಿದ್ದರು. ಕಛೇರಿಯ ಮೂಮೆಂಟ್ ರಿಜಿಸ್ಟರ್ ನಲ್ಲಿ ನಾನು ಮಹಜರ್ ಗೆ ಹೋಗುವ ಬಗ್ಗೆ ಉಲ್ಲೇಖ ಮಾಡಿರುವುದಿಲ್ಲ. ಕಛೇರಿಯ ಮೂಮೆಂಟ್ ರಿಜಿಸ್ಟರ್ ಪ್ರಕಾರ ನಾನು ಆ ದಿನ ಕಛೇರಿಯಲ್ಲಿ ಇದ್ದೆ. ಮಹಜರ್‌ಗೆ ಬರಬೇಕು ಎಂದು ನನಗೆ ಯಾವುದೇ ಲಿಖಿತ ನೋಟೀಸು ಕೊಟ್ಟಿರುವುದಿಲ್ಲ. ನನ್ನ ಮೇಲಾಧಿಕಾರಿಗಳು ನನಗೆ ಮಹಜರ್ ಗೆ ಹೋಗಲು ಯಾವುದೇ ನೋಟೀಸು ಕೊಟ್ಟಿರುವುದಿಲ್ಲ. ನಮ್ಮ ಕಛೇರಿಯಿಂದ ಹೊರಗೆ ಹೋಗಬೇಕಾದರೆ ಕಛೇರಿಯ ರಿಜಿಸ್ಟರ್ ನಲ್ಲಿ ಅದರ ಬಗ್ಗೆ ಉಲ್ಲೇಖ ಮಾಡಬೇಕೆಂಬುದು ನನಗೆ ಗೊತ್ತಿದೆ.

ನಮ್ಮ ಕಛೇರಿಯಿಂದ ಕಕ್ಕೆ ಹೊಳೆಗೆ ಅರ್ಧ ಕಿ.ಮೀ. ದೂರ ಇದೆ. ನನ್ನ ದ್ವಿಚಕ್ರ ವಾಹನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿಗೆ ಹೋಗಿದ್ದೆ, ಆ ನಂತರ ಅವರು ನನ್ನನ್ನು ಅಲ್ಲಿಂದ ಕರೆದುಕೊಂಡು ಹೋಗಿದ್ದರು. ನಾನು ಸರ್ಕಲ್ ಇನ್ಸ್ ಪೆಕ್ಟರ್ ಕಛೇರಿಗೆ ತೆರಳುವ ಸಂದರ್ಭದಲ್ಲಿ 12.15 ಗಂಟೆ ಆಗಿತ್ತು. ನಾನು 12.25 ಕ್ಕೆ ಸರ್ಕಲ್ ಇನ್ಸ್ ಪೆಕ್ಟರ್ ಕಛೇರಿಗೆ ತಲುಪಿದೆ. ಸರ್ಕಲ್ ಇನ್ಸ್ ಪೆಕ್ಟರ್ ಕಛೇರಿಯಲ್ಲಿ 2 ರಿಂದ 5 ನಿಮಿಷಗಳ ಕಾಲ ಇದ್ದೆ. ಸಾಕ್ಷಿಯು ಮುಂದುವರೆದು ನಾವು ಹೋದ ಕೂಡಲೆ ಹೊರಟೆವು ಎಂದು ನುಡಿಯುತ್ತಾರೆ. ಪೊಲೀಸರ ಜೀಪಿನಲ್ಲಿ ನಾನು, 2 ಜನ ಪೊಲೀಸರು, ಸರ್ಕಲ್ ಇನ್ಸ್ ಪೆಕ್ಟರ್ ಮತ್ತು ಪ್ರಾಸಾ-2 ರವರು ಇದ್ದರು. ಅವರನ್ನು ಬಿಟ್ಟು ಜೀಪಿನಲ್ಲಿ ಬೇರೆ ಯಾರು ಇದ್ದಿರಲಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಬೇರೆ ಯಾರು ಇದ್ದಿರಲಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಇದ್ದ ಬೇರೆ ಯಾವುದೇ ಸಾರ್ವಜನಿಕರನ್ನು ಪೊಲೀಸರು ಕರೆದಿರುವುದಿಲ್ಲ. ನಾನು ಕೃತ್ಯ ನಡೆದ ಸ್ಥಳಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿ ಬೈಕ್ ಇರಲಿಲ್ಲ. ಕೃತ್ಯ ನಡೆದ ಸ್ಥಳದ ಪೂರ್ವಕ್ಕೆ ಪೆಟ್ರೋಲ್ ಬಂಕ್, ಪಶ್ಚಿಮಕ್ಕೆ ಅಭಿಮನ್ಯು ವಕೀಲರ ಮನೆ, ಉತ್ತರಕ್ಕೆ ಏನು ಇದೆ ಎಂದು ಗೊತ್ತಿಲ್ಲ, ದಕ್ಷಿಣಕ್ಕೆ ಮಡಿಕೇರಿ ರಸ್ತೆ ಇದೆ. ಮಹಜರ್ ನಲ್ಲಿ ಪ್ರಾಸಾ-2 ರವರು ಹೇಳಿದ ರೀತಿಯಲ್ಲಿ ಬರೆದಿದ್ದಾರೆ.

ತಮ್ಮಣ್ಣನವರ ಮನೆಯ ಹತ್ತಿರ ಆರೋಪಿ ಕಾರಿನಿಂದ ಇಳಿದು ಹೋಗಿ ಕೋವಿಯನ್ನು ತಂದಿದ್ದರು ಎಂದು ಪ್ರಾಸಾ-2 ರವರು ನಮಗೆ ಹೇಳಿದ್ದರು. ಸದರಿ ಸ್ಥಳದ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಕಕ್ಕೆ ಹೊಳೆಯಿಂದ ತಮ್ಮಣ್ಣನವರ ಮನೆಗೆ ಒಂದೂವರೆ ಕಿ.ಮೀ. ದೂರ ಇದೆ. ಸದರಿ ಸ್ಥಳದಲ್ಲಿ ಅಂಗಡಿ ಬಿಟ್ಟರೆ ಕೆಲವು ಮನೆಗಳು ಮತ್ತು ಅಂಗಡಿಯಿಂದ 100 ಮೀಟರ್ ದೂರದಲ್ಲಿ ಒಂದು ಲೈಟ್ ಕಂಬ ಇದೆ. ನಾವು ಕೃತ್ಯ ನಡೆದ ಸ್ಥಳದಲ್ಲಿ ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ, ಆದರೆ 4 ಜನರು ದೂರದಲ್ಲಿ ಇದ್ದರು. ವೈಯಕ್ತಿಕವಾಗಿ ನನಗೆ ಈ ಪ್ರಕರಣದಲ್ಲಿ ಏನು ಆಗಿದೆ ಎಂದು ಗೊತ್ತಿಲ್ಲ. ನಾನು ಯಾವುದೇ ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮಹಜರ್ ಗೆ ಪಂಚನಾಗಿ ಸಹಕರಿಸಿರುವುದಿಲ್ಲ, ನಾನು ಆ ದಿನ ಕಛೇರಿಯಲ್ಲಿ ಇದ್ದೆ, ಆ ಕಾರಣದಿಂದ ನನ್ನ ಕಛೇರಿಯ ರಿಜಿಸ್ಟರ್ ನಲ್ಲಿ ಉಲ್ಲೇಖ ಇಲ್ಲ ಅಂದರೆ ಸರಿಯಲ್ಲ. ನಾನು ಪೊಲೀಸರ ಕೋರಿಕೆ ಮೇರೆಗೆ ನಿಪಿ-2 ಹಾಗೂ ನಿಪಿ-3 ಕ್ಕೆ ನನ್ನ ಕಛೇರಿಯಲ್ಲಿ ಸಹಿ ಹಾಕಿದ್ದೇನೆ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.